www.vijyaasasaru.net

## ಶ್ರೀ ಗುರುಗೋಪಾಲದಾಸರಾಯರ

# ಶ್ರೀವಾಯುದೇವರ ಅವತಾರತ್ರಯಮಹಿಮಾನುವರ್ಣನ ಪದ

ರಾಗ-ಕಾಂಬೋದಿ ಝುಂಪೆತಾಳ

ಐದನೇ ತಿಂಗಳಲಿ ನಿಶ್ಚೈಸಿದೆ ॥ ಪ ॥
ಐದುವರುಷದವನು ಮುಂದಾಹ ಶುಭಚರಿತೆ ॥ಅ.ಪ.॥

ಐದರೊಳಗೊಂದರ ತನಯನೆನಿಸಿಕೊಂಡು
ಐದರೊಳಗೊಂದು ಮಾರ್ಗವನೆ ಪಿಡಿದು
ಐದರೊಳಗೊಂದು ರಾಶಿಯ ಹಾರಿ ರಕ್ಕಸರ
ಐದೆರಡುವರುಷಗಳ ಮ್ಲಾನಮಾಡಿದನೆಂದು ॥ 1 ॥

ಐದರೊಳಗೊಂದರ ತನಯಳಿಗೆ ನಮಿಸಿ ಮ-
ತ್ತೈದೆರಡುಮುಖದವನ ಸುತವೀರನ
ಐದತ್ವೈದಿಸಿ ಅರಿಯವರ ಪುರವನ್ನು
ಐದರೊಳಗೊಬ್ಬನ ಮುಖಕ್ಕೆ ನೀಡಿದನೆಂದು ॥ 2 ॥

ಐದು ಇಂದ್ರಿಯಗಳೊಳಗೊಂದರಧಿಪನ ಸುತನ
ಐದು ಪ್ರಾಣವನು ಸೆಳೆದವನ ರಥಕೆ
ಐದುನಾಲ್ಕುಗ್ರಹಗಳೊಳಗೆ ಕಡೆಯವನೆನಿಸಿ
ಐದುರೂಪದಿ ನಮ್ಮೊಳಿದ್ದು ಸಲಹುವನೆಂದು ॥ 3 ॥

ಐದರೊಳು ನೋಡಲು ಅತಿಬಲವೆಂದೆನಿಸಿ
ಐದೊಂದು ರಥಿಕರೊಳು ಅಧಿಕನೆನಿಸಿ
ಐದುಪುರಬೇಡೆ ಕೊಡದಿರಲವನ ಮಡದಿಯರ
ಐದುಮುತ್ತುಳ್ಳತನ ದೂರಮಾಡಿದನೆಂದು ॥ 4 ॥

ಐದುಬಾಣನ ಗೆಲಿದ ಆಶ್ರಮವ ಕೈಕೊಂಡು
ಐದೊಂದು ಅರಿಗಳನು ಮುರಿದು ಮೆಟ್ಟಿ
ಐದುಪ್ರಾಣರಿಗೆ ಗುರುಗೋಪಾಲವಿಟ್ಠಲನ
ಐದೆರಡು ನಾಮಗಳಿಂದ ಭಜಿಸುವನೆಂದು ॥ 5 ॥